ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.447/2023

ಸಾಕ್ಷಿಯ ಹೆಸರುಃ ಕಿರಣ್ ಕುಮಾರ್ ಪಿ ಚಾಸಾಃ 1

ತಂದೆಯ ಹೆಸರುಃ ಪುಟ್ಟರಾಜೇ ಗೌಡ ಪ್ರಾಸಾಃ 3

ವಯಸ್ಸುಃ 31 ವರ್ಷ

ಉದ್ಯೋಗಃ ಪಿ ಎಸ್ ಐ., ಅರಣ್ಯ ಸಂಚಾರಿ ದಳ , ಮೈಸೂರು

ವಾಸಃ ಮೈಸೂರು

ದಿನಾಂಕಃ26/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ನಾನು 21/02/2022 ರಿಂದ 22/03/2023 ರವರೆಗೂ ಜಯಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ23/02/2023 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಮಾನ್ಯ ಸಿ ಪಿ ಐ ಮೊ11/2023 ರಲ್ಲಿ ಆರೋಪಿಯಾದ ರಮೇಶ ,ಬಿನ್ ಸೋಮಯ್ಯ ರವರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಆದೇಶಿಸಿದ ಮೇರೆಗೆ ಬಾತ್ಮೀದಾರರಿಂದ ಮಾಹಿತಿ ಪಡೆದಾಗ ಆತನು ಹೊರನಾಡಿನಲ್ಲಿರುವ ಬಗ್ಗೆ ಮಾಹಿತಿ ಬಂದಿದ್ದು ರಾತ್ರಿ 10 ಗಂಟೆಗೆ ಠಾಣಾ ಸಿಬ್ಬಂದಿಗಳಾದ ಮಂಜುನಾಥ ಮತ್ತು ಆನಂದ್ ಅವರೊಂದಿಗೇ ರಾತ್ರಿ 10 ಗಂಟೆಗೆ ಠಾಣೆಯಿಂದ ಹೊರಟು 11-30 ಕ್ಕೆ ಹೊರನಾಡಿಗೆ ಹೋಗಿದ್ದು ಆರೋಪಿಯು ಹೊರನಾಡಿನ ಅನ್ನಪೂರ್ಣೇಶ್ವರಿ ದೇವಸ್ಥಾನದ ಬಳಿ ಇದ್ದು ಅವನನ್ನು ವಶಕ್ಕೆ ಪಡೆದು ರಾತ್ರಿ 12 ಗಂಟೆಗೆ ಠಾಣೆಗೆ ಹಾಜರಾಗಿ ಠಾಣೆಯಲ್ಲಿ ಇರಿಸಿ ಸಿಪಿಐ ಯವರಿಗೆ ವರದಿ ನೀಡಿರುತ್ತೇನೆ. ನಂತರ ನಾನು ರಾತ್ರಿ ವಿಶ್ರಾಂತಿಗೆ ತೆರಳಿರುತ್ತೇನೆ. ನಂತರ ಬೆಳಿಗ್ಗೇ ಚಾಸಾ 6 ರವರು ನನಗೆ ಕರೆ ಮಾಡಿ ಆರೋಪಿಯು

ಆತನನ್ನು ತಳ್ಳಿ ಅಲ್ಲಿಂದ ಓಡಿಹೋಗಿದ್ದು ಅವರು ಹಾಗೂ ಠಾಣಾ ಎಸ್ ಹೆಚ್ ಓ ಆಗಿದ್ದ ಬೀಮಾ ನಾಯಕ್ ಅವರು ಹಿಡಿಯಲು ಪ್ರಯತ್ನಿಸಿದ್ದರೂ ಆತ ಸಿಕ್ಕಿರುವುದಿಲ್ಲ.

ನಂತರ ಸದರಿ ಆರೋಪಿಯನ್ನು ಪತ್ತೆಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಚಾಸಾ 13 ಅವರಿಗೆ ಸಲ್ಲಿಸಿರುತ್ತೇನೆ.

ನಂತರ ಮಾರನೆ ದಿನ ಬೆಳಗಿನ ಜಾವ ಆತನನ್ನು ವಶಕ್ಕೆ ಪಡೆದು ಮಾನ್ಯ ಸಿಪಿಐ ಅವರ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಸಿಪಿ ಐ ಯವರು ಠಾಣಾ ದಿನಚರಿ ಪಹರೆ ಕರ್ತವ್ಯದ ರಿಜಿಸ್ಟರ್ ಹಾಗೂ ಆರೋಪಿ ತಪ್ಪಿಸಿಕೊಂಡ ಬಗ್ಗೆ ಸಿಸಿ ಟಿವಿ ದೃಶ್ಯಾವಳಿ ನೀಡುವಂತೆ ಆದೇಶಿಸಿದ್ದು ಅದರಂತೆ ನಾನು ಠಾಣಾ ದಿನಚರಿ ಪುಸ್ತಕ ಹಾಗೂ ಸಿಸಿ ಟಿವಿ ಪೂಟೇಜನ್ನು ಹಾಗೂ ಕಲಂ 65 ಬಿ ರೀತ್ಯಾ ದೃಢೀಕರಣ ನೀಡಿರುತ್ತೇನೆ.

ದೂರನ್ನು ನಿಪಿ.6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

ಸಿಸಿ ಟಿವಿಯ ಫೂಟೇಜ್ ಗಳನ್ನು ನಿಪಿ.7 ಹಾಗೂ ನಿಪಿ.8 ಎಂದು ಗುರುತಿಸಲಾಯಿತು. ಕಲಂ 65 ಬಿ ರೀತ್ಯಾ ದೃಡೀಕರಣವನ್ನು ನಿಪಿ.9 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು.

ಠಾಣಾ ದಿನಚರಿಯ ದಾಖಲೆಯನ್ನು ನಿಪಿ.10, ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು.

ಪಹರೆ ಹಾಜರಾತಿ ದಿನಚರಿಯ ಪುಸ್ತಕವನ್ನು ನಿಪಿ.11 , ಸಾಕ್ಷಿಯ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರಃ ಶ್ರೀ ಎಸ್ ಬಿ., ವಕೀಲರಿಂದಃ</u>

(ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ